<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1380
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 24.12.2021
ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಕೇವಲ ಅಧ್ಯಕ್ಷರನ್ನು ಮಾತ್ರ ನೇಮಿಸಿ, ಪೂರ್ಣ ಪ್ರಮಾಣದ ಆಡಳಿತ ಮಂಡಳಿ ರಚಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪೂರ್ಣ ಪ್ರಮಾಣದ ಆಡಳಿತ ಮಂಡಳಿ ಯಾವಾಗ ರಚನೆ ಮಾಡಲಾಗುವುದು;	-ಹೌದು- ಕಲ್ಯಾಣ (ಹಿಂದಿನ ಹೈದ್ರಾಬಾದ) ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಆರ್:ಪಿಎಲ್‌ಎಕ್ಸ್:2012, ದಿನಾಂಕ: 06.11.2013ರನ್ವಯ ರಚನೆಯಾಗಿದ್ದು, 2013 ರಿಂದ ಪ್ರಾರಂಭವಾಗಿದೆ. ಮಂಡಳಿಯ ಆಡಳಿತ ಮಂಡಳಿಗೆ ಒಬ್ಬರು ಅಧ್ಯಕ್ಷರು, ಎಂಟು ಜನ ವಿಧಾನ ಸಭೆಯ ಸದಸ್ಯರು, ಇಬ್ಬರು ವಿಧಾನ ಪರಿಷತ್ ಸದಸ್ಯರು, ಒಬ್ಬರು ಸಂಸತ್ತಿನ ಸದಸ್ಯರು, ಒಬ್ಬರು ಜಿಲ್ಲಾ ಪಂಚಾಯತ ಅಧ್ಯಕ್ಷರು, ಒಬ್ಬರು ಸ್ಥಳೀಯ ಸಂಸ್ಥೆಯ ಅಧ್ಯಕ್ಷ/ಮೇಯರ್ ಮತ್ತು ಐದು ಜನ ತಜ್ಞರನ್ನು ಒಳಗೊಂಡಿರುತ್ತದೆ. ಪ್ರಸ್ತುತ ಮಂಡಲಿಗೆ ಒಬ್ಬರು ಅಧ್ಯಕ್ಷರು ಹಾಗೂ ಒಬ್ಬರು ಸದಸ್ಯರನ್ನು ನೇಮಕ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯನ್ನು ಪೂರ್ಣ ಪ್ರಮಾಣದಲ್ಲಿ ರಚನೆ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇದೆ.
ಆ	ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪೂರ್ಣ ಪ್ರಮಾಣದ ಆಡಳಿತ ಮಂಡಳಿ ರಚಿಸದಿರುವುದರಿಂದ ಮಂಡಲೀಯ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಇದೆಯೇ; ಹಾಗಿದ್ದಲ್ಲಿ, ಪೂರ್ಣ ಪ್ರಮಾಣದ ಆಡಳಿತ ಮಂಡಳಿ ರಚಿಸಲು ಸರ್ಕಾರಕ್ಕಿರುವ ತೊಂದರೆಗಳೇನು?	-ಇಲ್ಲ- 2021-22ನೇ ಸಾಲಿನಲ್ಲಿ ಮಂಡಳಿಗೆ ರೂ.1492.97 ಕೋಟಿಗಳನ್ನು ಆಯವ್ಯಯದಲ್ಲಿ ನಿಗಧಿಪಡಿಸಿದ್ದು, ಈವರೆಗೆ ರೂ.415.16 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಆರಂಭಿಕ ಶಿಲ್ಕನ್ನು ಒಳಗೊಂಡಂತೆ ರೂ.620.65 ಕೋಟಿಗಳು ವೆಚ್ಚವಾಗಿರುತ್ತದೆ. **ಶೇಕಡ** 75 **ರಷ್ಟು ಆರ್ಥಿಕವಾಗಿ** ಪ್ರಗತಿ ಸಾಧಿಸಲಾಗಿದೆ.

<table>
<tr>
<td></td>
<td></td>
<td>ಸದರಿ ಯೋಜನೆಯಡಿ ಒಟ್ಟಾರೆ, 4368 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯನ್ನು ಮಂಜೂರು ಮಾಡಿದ್ದು, ಅಕ್ಟೋಬರ್-2021ರ ಅಂತ್ಯದವರೆಗೆ 3154 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ಶೇಕಡ 72 ರಷ್ಟು ಭೌತಿಕವಾಗಿ ಪ್ರಗತಿ ಸಾಧಿಸಲಾಗಿದೆ.

ಕಾಮಗಾರಿಗಳ ಅನುಷ್ಠಾನವನ್ನು ವಿವಿಧ ಏಜೆನ್ಸಿಗಳು, ಜಿಲ್ಲಾಧಿಕಾರಿಗಳ ಹಂತದಲ್ಲಿ ಅನುಷ್ಠಾನ ಮಾಡುವುದರಿಂದ ಕಾಮಗಾರಿಗಳ ಪ್ರಗತಿ ಕುಂಠಿತವಾಗಿರುವುದಿಲ್ಲ.</td>
</tr>
<tr>
<td>ಇ</td>
<td>ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2013 ರಿಂದ 2021ರವರೆಗೆ ವರ್ಷವಾರು ನಿಗಧಿಗೊಳಿಸಲಾದ ಅನುದಾನವೆಷ್ಟು; ಬಿಡುಗಡೆಗೊಳಿಸಲಾದ ಅನುದಾನವೆಷ್ಟು; ಮಂಡಳಿಯು ಇಲ್ಲಿಯವರೆಗೆ ಖರ್ಚು ಮಾಡಿರುವ ಅನುದಾನವೆಷ್ಟು? (ವರ್ಷವಾರು ವಿವರ ನೀಡುವುದು)</td>
<td>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2013-2014ನೇ ಸಾಲಿನಿಂದ ಇಲ್ಲಿಯವರೆಗೆ ವರ್ಷವಾರು ನಿಗಧಿಗೊಳಿಸಲಾದ ಅನುದಾನ, ಬಿಡುಗಡೆಗೊಳಿಸಲಾದ ಅನುದಾನ ಹಾಗೂ ಮಂಡಳಿಯು ಇಲ್ಲಿಯವರೆಗೆ ಮಾಡಿರುವ ವೆಚ್ಚದ ಅನುದಾನದ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

(ರೂ.ಕೋಟಿಗಳಲ್ಲಿ)
<table>
<tr><th>ಆರ್ಥಿಕ ವರ್ಷ</th><th>ಮಂಡಳಿಗೆ ನಿಗದಿಯಾದ ಅನುದಾನ</th><th>ಮಂಡಳಿಗೆ ಬಿಡುಗಡೆಯಾದ ಅನುದಾನ</th><th>ಖರ್ಚಾದ ಅನುದಾನ *</th></tr>
<tr><td>2013-14</td><td>153.50</td><td>78.97</td><td>26.66</td></tr>
<tr><td>2014-15</td><td>600.00</td><td>300.00</td><td>322.59</td></tr>
<tr><td>2015-16</td><td>1000.00</td><td>750.00</td><td>493.66</td></tr>
<tr><td>2016-17</td><td>1000.00</td><td>750.00</td><td>960.02</td></tr>
<tr><td>2017-18</td><td>1000.00</td><td>800.00</td><td>450.32</td></tr>
<tr><td>2018-19</td><td>1000.00</td><td>1000.00</td><td>1193.53</td></tr>
<tr><td>2019-20</td><td>1500.00</td><td>1125.00</td><td>1246.81</td></tr>
<tr><td>2020-21</td><td>1131.86</td><td>1031.86</td><td>926.43</td></tr>
<tr><td>2021-22 (ನವೆಂಬರ್-2021 ರ ಅಂತ್ಯಕೆ ಇದ್ದಂತೆ)</td><td>1492.97</td><td>415.16</td><td>620.65</td></tr>
</table>
*ಭರಿಸಲಾದ ವೆಚ್ಚವು ಆರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.</td>
</tr>
</table>

ಈ	ಕರ್ನಾಟಕ ಸರ್ಕಾರದ ಸಚಿವ ಸಂಪುಟ ಸಭೆ ದಿನಾಂಕ:24.11.2014 ರಂದು ಕಲಬುರಗಿ ನಗರದಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 400.00 ಕೋಟಿ ರೂಪಾಯಿ ವಿಶೇಷ ಅನುದಾನ ನೀಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ವರ್ಷ ಬಿಡುಗಡೆಗೊಳಿಸಲಾಗಿದೆ; (ವಿವರ ನೀಡುವುದು) ಸದರಿ ಅನುದಾನ ಬಿಡುಗಡೆಯಾಗಿದಿರಲು ಕಾರಣವೇನು;	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2014-15ನೇ ಸಾಲಿನಲ್ಲಿ ರೂ.600.00 ಕೋಟಿಗಳನ್ನು ನಿಗದಿಪಡಿಸಿದ್ದು, 2015-16ನೇ ಸಾಲಿನಿಂದ ಹೆಚ್ಚುವರಿಯಾಗಿ ರೂ.400.00 ಕೋಟಿಗಳನ್ನು ನಿಗದಿಪಡಿಸುತ್ತಾ ಬಂದಿದ್ದು, ಪ್ರಸ್ತುತ 2021-22ನೇ ಸಾಲಿನಲ್ಲಿ ರೂ.1492.97 ಕೋಟಿಗಳ ಅನುದಾನವನ್ನು ನಿಗದಿಪಡಿಸಿದೆ.
ಉ	ಸಚಿವ ಸಂಪುಟ ಸಭೆಯ ನಿರ್ಣಯದಂತೆ 400.00 ಕೋಟಿ ರೂಪಾಯಿ ಅನುದಾನವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು? (ಮಾಹಿತಿ ನೀಡುವುದು)	- ಅನ್ವಯಿಸುವುದಿಲ್ಲ -

ಸಂಖ್ಯೆ: ಪಿಡಿಎಸ್ 144 ಹೆಚ್ ಕೆಡಿ 2021

(ಮುನಿರತ್ನ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು.